# ಕರ್ನಾಟಕ ಸರ್ಕಾರ

ಸಂಖ್ಯೆ:ಪಸಂಮೀ 142 ಮೀಇಯೋ 2012

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿನಾಂಕ:09-07-2012

## ಅಧಿಸೂಚನೆ

ಕರಾವಳಿ ಜಲಸಂಪನ್ಮೂಲ ಹಾಗೂ ಮತ್ಸ್ಯೋದ್ಯಮ ಸಂರಕ್ಷಣೆಗಾಗಿ, ಯಾಂತ್ರಿಕ ಮೀನುಗಾರಿಕಾ ದೋಣಿಗಳ ಅಳತೆಗೆದುಆಗಿ ಇಂಜಿನ್‌ನನ್ನು ಅಳವಡಿಸಲು ಅಶ್ವಶಕ್ತಿಯ ಪ್ರಮಾಣವನ್ನು, ಕರ್ನಾಟಕ ಕರಾವಳಿ ಮೀನುಗಾರಿಕೆ ಅಧಿನಿಯಮ 1986 ಅಡಿ ಸೆಕ್ಷನ್ 3(1)(ಎ)ರ ಪ್ರಕಾರ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನಂತೆ ನಿಗದಿಗೊಳಿಸಲಾಗಿದೆ.

| ಕ್ರಮ ಸಂಖ್ಯೆ | ಯಾಂತ್ರಿಕ ದೋಣಿಗಳ ಉದ್ದ (ಎಲ್.ಒ.ಎ.) | ಅಳವಡಿಸಬಹುದಾದ ಅಶ್ವಶಕ್ತಿ |
|---|---|---|
| 1) | ಟ್ರಾಲ್ ಬೋಟ್ ಉದ್ದ | |
| | 15 ಮೀ. ವರೆಗೆ | 140 ಹೆಚ್.ಪಿ. |
| | 15 – 17.5 ಮೀ | 200 ಹೆಚ್.ಪಿ. |
| | 17.5 – 20 ಮೀ. | 250 ಹೆಚ್.ಪಿ. |
| 2) | ಪರ್ಸೀನ್ | |
| | 15 ಮೀ.ವರೆಗೆ | 190 ಹೆಚ್.ಪಿ. |
| | 15 – 20 ಮೀ. | 240 ಹೆಚ್.ಪಿ. |
| 3) | ಗಿಲ್‌ನೆಟ್ ಮತ್ತು ಲಾಂಗ್‌ಲೈನ್ | |
| | 15 ಮೀ.ವರೆಗೆ | 90 ಹೆಚ್.ಪಿ. |
| | 15.0 – 20.0 ಮೀ. | 140 ಹೆಚ್.ಪಿ. |

250 ಕ್ಕಿಂತ ಹೆಚ್ಚಿನ ಅಶ್ವಶಕ್ತಿಯ ಇಂಜಿನನ್ನು ಅಳವಡಿಸುವುದನ್ನು ನಿಷೇಧಿಸಲಾಗಿದೆ. ಈಗಾಗಲೇ 250 ಹೆಚ್.ಪಿ.ಗಿಂತ ಹೆಚ್ಚಿನ ಅಶ್ವಶಕ್ತಿ ಹೊಂದಿದ ಹಾಗು ಇಲಾಖೆಯಲ್ಲಿ ನೋಂದಣಿ ಮಾಡಿರುವ ಯಾಂತ್ರೀಕೃತ ಮೀನುಗಾರಿಕೆ ದೋಣಿ ಮಾಲೀಕರಿಗೆ ಇಂಜಿನನ್ನು ಬದಲಾಯಿಸಲು ಆರು ತಿಂಗಳುಗಳ ಸಮಯಾವಕಾಶ ನೀಡಲಾಗಿದೆ. ಅವಧಿ ಮುಗಿದನಂತರ ನಿಷೇಧಿತ ದೋಣಿಗಳಿಗೆ ರಾಜ್ಯ ಮಾರಾಟ ಕರಮುಕ್ತ ಡೀಸಲ್ ಸರಬರಾಜನ್ನು ನಿಲ್ಲಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

9/7/12
(ಡಿ.ಎಂ.ರಾಜಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

**ಇವರಿಗೆ:**

1) ಮಹಾಲೇಖಪಾಲರು (ಎ ಮತ್ತು ಇ)(ಆಡಿಟ್ 1 ಮತ್ತು 2), ಕರ್ನಾಟಕ, ಬೆಂಗಳೂರು.
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
3) ಶ್ರೀ ವಿ.ಕೆ.ಶೆಟ್ಟಿ, ಯೋಜನಾ ಸಮನ್ವಯಾಧಿಕಾರಿ, ಮಲ್ಪೆ ಮತ್ತು ಹೊನ್ನಾವರ ಮೀನುಗಾರಿಕೆ ಬಂದರುಗಳ ಯೋಜನೆ, ಮಲ್ಪೆ.

MEF

8/8/13

4029

# ಕರ್ನಾಟಕ ಸರ್ಕಾರ

ಸಂಖ್ಯೆ:ಪಸಂಮೀ 99 ಮೀಇಯೋ 2013

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿನಾಂಕ:01-08-2013

## ಅಧಿಸೂಚನೆ

ಸಂಖ್ಯೆ:ಪಸಂಮೀ/142/ಮೀಇಯೋ/2012, ದಿನಾಂಕ:09-07-2012 ಮತ್ತು 21-11-2012ರ ಅಧಿಸೂಚನೆಗಳಲ್ಲಿ ಕರಾವಳಿ ಜಲಸಂಪನ್ಮೂಲ ಹಾಗೂ ಮತ್ಸ್ಯೋದ್ಯಮ ಸಂರಕ್ಷಣೆಗಾಗಿ, ಯಾಂತ್ರಿಕ ಮೀನುಗಾರಿಕಾ ದೋಣಿಗಳ ಅಳತೆಗೆದುರಾಗಿ ಇಂಜಿನ್‌ನನ್ನು ಅಳವಡಿಸಲು ಅಶ್ವಶಕ್ತಿಯ ಪ್ರಮಾಣವನ್ನು ನಿಗದಿಗೊಳಿಸಿ ಹಾಗೂ 250 ಕ್ಕಿಂತ ಹೆಚ್ಚಿನ ಅಶ್ವಶಕ್ತಿಯ ಇಂಜಿನನ್ನು ಅಳವಡಿಸುವುದನ್ನು ನಿಷೇಧಿಸಿ, ಈಗಾಗಲೇ 250 ಹೆಚ್.ಪಿ.ಗಿಂತ ಹೆಚ್ಚಿನ ಅಶ್ವಶಕ್ತಿ ಹೊಂದಿದ ಹಾಗು ಇಲಾಖೆಯಲ್ಲಿ ನೋಂದಣಿ ಮಾಡಿರುವ ಯಾಂತ್ರೀಕೃತ ಮೀನುಗಾರಿಕೆ ದೋಣಿ ಮಾಲೀಕರಿಗೆ ಇಂಜಿನನ್ನು ಬದಲಾಯಿಸಲು ನೀಡಿದ್ದ 06 ತಿಂಗಳುಗಳ ಅವಧಿಯು ಅಂತ್ಯಗೊಳ್ಳುವ ದಿನಾಂಕದಿಂದ ಮುಂದಿನ 06 ತಿಂಗಳುಗಳವರೆಗೆ ವಿಸ್ತರಿಸಲಾಗಿರುವುದನ್ನು ಹಿಂಪಡೆಯಲಾಗಿದೆ.

ಯಾಂತ್ರೀಕೃತ ಮೀನುಗಾರಿಕಾ ದೋಣಿಗಳ ಇಂಜಿನ್‌ಗಳ ಅಶ್ವಶಕ್ತಿಯ ಪ್ರಮಾಣವನ್ನು ಕರ್ನಾಟಕ ಕರಾವಳಿ ಮೀನುಗಾರಿಕೆ ಅಧಿನಿಯಮ 1986 ಅಡಿ ಸೆಕ್ಷನ್ 3(1)(ಎ)ರ ಪ್ರಕಾರ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಗರಿಷ್ಠ 350 ಅಶ್ವಶಕ್ತಿಗೆ ಮಿತಿಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಯಲಕ್ಷ್ಮಿ) 1/8/2013
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ)
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ಈ ಅಧಿಸೂಚನೆಯನ್ನು ಮುಂದಿನ ಸಂಚಿಕೆಯಲ್ಲಿ ಮುದ್ರಿಸಲು ಮತ್ತು ಮುದ್ರಿತ 100 ಪ್ರತಿಗಳನ್ನು ಈ ಇಲಾಖೆಗೆ ಒದಗಿಸಲು ಕೋರಿದೆ.

ಪ್ರತಿ:

1) ಮಹಾಲೇಖಪಾಲರು (ಎ ಮತ್ತು ಇ)(ಆಡಿಟ್ 1 ಮತ್ತು 2), ಕರ್ನಾಟಕ, ಬೆಂಗಳೂರು.
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
3) ಮೀನುಗಾರಿಕೆ ಜಂಟಿ ನಿರ್ದೇಶಕರು, ಮೀನುಗಾರಿಕೆ ಬಂದರುಗಳು, ಮಲ್ಪೆ
4) ಮೀನುಗಾರಿಕೆ ಉಪ ನಿರ್ದೇಶಕರು, ಮಂಗಳೂರು/ಕಾರವಾರ.
5) ಮಾನ್ಯ ಯುವಜನ ಸೇವಾ ಮತ್ತು ಮೀನುಗಾರಿಕೆ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
6) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆರವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
7) ಶಾಖಾ ರಕ್ಷಾ ಕಡತ:ಹೆಚ್ಚಿನ ಪ್ರತಿಗಳು.